

ಎನ್ನುತ್ತಾರೆ ರಿಟೇಲ್ ಮಾರಾಟಗಾರರು.

## ಡಿಸೈನರ್ ರವಿಕೆಗಳು

ಸೀರೆಯ ಸೊಬಗಿದ್ದರೆ ಮಾತ್ರ ಸಾಕೇ ನೀರೆಗೆ, ಸೀರೆಯ ಅಂದ ಹೆಚ್ಚಿಸುವ ರವಿಕೆಗಳು ಬೇಡವೇ? ಹಿಂದೆ ಸೀರೆಯ ಜೊತೆಗೇ ಇರುವ ರವಿಕೆ ಬಟ್ಟೆಯನ್ನು ಉದ್ದ ತೋಳಿನದ್ದೋ, ಅರೆ ತೋಳಿನದ್ದೋ ಹೊಲಿಸುವ ರೂಢಿಯಿತ್ತು. ಕತ್ತು ಕೂಡ ಹೆಚ್ಚು ಫ್ಯಾಷನ್ ಆಗಿರದೆ ಚೌಕ, ಅರ್ಧ ಚಂದ್ರಾಕಾರ ಮೊದಲಾದ ವಿನ್ಯಾಸದಲ್ಲಿದ್ದರೆ ಸಾಕು ಎಂಬಂತಹ ಮನೋಭಾವ. ತೋಳಿಗೆ ಜರಿಯಂಚು ಬರುವಂತೆ ಎಚ್ಚರಿಕೆ ವಹಿಸುತ್ತಿದ್ದರಷ್ಟೆ. ಆದರೆ ಕಳೆದ 7–8 ವರ್ಷಗಳಿಂದೀಚೆಗೆ ರವಿಕೆ ವಿನ್ಯಾಸದಲ್ಲಿ ಮಹತ್ತರ ಬದಲಾವಣೆಯಾಗಿದೆ. ಚಿನ್ನದ ಬಣ್ಣ, ಬೆಳ್ಳಿ ರಂಗು, ಇದೀಗ ಮೆಜೆಂಟ್ ವರ್ಣದ ರವಿಕೆಗಳು ಜನಪ್ರಿಯವಾಗಿವೆ. ಕತ್ತಿನ ವಿನ್ಯಾಸ, ತೋಳಿನ ವಿನ್ಯಾಸದಲ್ಲೂ ಬದಲಾವಣೆಗಳಾಗಿವೆ. ಕಸೂತಿ, ಲೇಸ್, ಮಣಿಗಳಿಂದ ಅಲಂಕಾರ ಮಾಡಿಸುವ ಪ್ರವೃತ್ತಿಯೂ ಹೆಚ್ಚಾಗಿದೆ. ದೊಡ್ಡ ದೊಡ್ಡ ಅಂಗಡಿ ಮಳಿಗೆಗಳಲ್ಲದೇ, ಓಣಿಯಲ್ಲಿರುವ ಟೇಲರ್ ಕೂಡಾ ವಿನ್ಯಾಸದ ಪುಸ್ತಕವನ್ನು ಇಟ್ಟುಕೊಂಡು ಬೇಡಿಕೆ ಮೇರೆಗೆ ಹೊಲಿದು ಕೊಡುವ ಪರಿಪಾಠ ಸಣ್ಣ ಸಣ್ಣ ಊರುಗಳಲ್ಲಿಯೂ ಶುರುವಾಗಿದೆ. ಬೆನ್ನು, ತೋಳು ಮುಚ್ಚುವಂತಹ ರವಿಕೆಗಳ ಬದಲಾಗಿ ಅಗಲ ಕತ್ತಿನ, ಆಭರಣಗಳು ಕಾಣುವಂತಹ ರವಿಕೆಗಳನ್ನು ತೊಟ್ಟು ಪ್ರಯೋಗ ಮಾಡುವವರಿದ್ದರೆ, ಇನ್ನು ಕೆಲವರು ಹೈನೆಕ್ ಅಂದರೆ ಕತ್ತು ಮುಚ್ಚುವಂತಹ ರವಿಕೆ ಧರಿಸಿ ಲಾವಣ್ಯ ಮೆರೆವವರಿದ್ದಾರೆ.

'ಎರಡು ತಿಂಗಳಿಗೊಮ್ಮೆ ರವಿಕೆ ವಿನ್ಯಾಸ ಬದಲಾಗುತ್ತಿದೆ' ಎನ್ನುವ ಅಭಿಷೇಕ್, ತಮ್ಮ ಮಳಿಗೆಯಲ್ಲಿ ದೆಹಲಿ, ಲಕ್ನೋದಲ್ಲಿ ವಿನ್ಯಾಸ ಮಾಡಿದ ರವಿಕೆಗಳು ಲಭ್ಯ ಎನ್ನುತ್ತಾರೆ.

ಆಧುನಿಕ ವಿನ್ಯಾಸದ ರವಿಕೆಗಳ ಬೆಲೆಯೇ ಐದಾರು ಸಾವಿರ ರೂಪಾಯಿಯಿಂದ ಶುರು. ಕೆಲವು ಡಿಸೈನರ್ ಸೀರೆಗಳನ್ನು ಮಾರಾಟ ಮಾಡುವವರು ಸೀರೆಯ ಜೊತೆ ಸಿದ್ಧಪಡಿಸಿದ ಡಿಸೈನರ್ ರವಿಕೆಗಳನ್ನೂ ನೀಡುತ್ತಿದ್ದಾರೆ. ನುರಿತ ಕೆಲಸಗಾರರು ಸೀರೆಯನ್ನು ಮಳಿಗೆಯಲ್ಲೇ ಉಡಿಸಿ ಖರೀದಿಸಲು ಪ್ರೇರಣೆ ನೀಡುವುದು ಇತ್ತೀಚೆಗೆ ಜಾಸ್ತಿಯಾಗಿದೆ. ತರಾತುರಿಯಲ್ಲಿ ಮದುವೆ ನಿಶ್ಚಯವಾಗಿ ಟೇಲರ್ ಬಳಿ ತಿಂಗಳುಗಟ್ಟಲೆ ಕಾಯುವ ವ್ಯವಧಾನ ಇಲ್ಲದವರು ಇಂತಹ 'ರೆಡಿ ಟು ವೇರ್' ಪ್ಯಾಕೇಜಿನ ಮೊರೆ ಹೋಗುತ್ತಿದ್ದಾರೆ.

## ಲೆಹಂಗಾ- ಚೋಲಿ

ಸೀರೆಗಳು ಮದುವೆ ಸಮಾರಂಭಕ್ಕಾದರೆ ಲೆಹಂಗ, ಗೌನ್‌ಗಳು ನಿಶ್ಚಿತಾರ್ಥಕ್ಕೆ, ಆರತಕ್ಷತೆಗೆ ಶೋಭೆ ಎನ್ನುತ್ತಾರೆ ಫ್ಯಾಷನ್ ವಿನ್ಯಾಸಗಾರರು. ಸೀರೆಗಿಂತ ಲೆಹಂಗ ಧರಿಸುವುದು ಆರಾಮ ಎನ್ನುವವರೂ ಇದ್ದಾರೆ. ಈ ಮೊದಲು ಉತ್ತರ ಮತ್ತು ಮಧ್ಯ ಭಾರತಕ್ಕೆ ಸೀಮಿತವಾಗಿದ್ದ ಈ ಲೆಹಂಗ– ಚೋಲಿ ಬಾಲಿವುಡ್


# ಶ್ರೀ ಪಂಚಮುಖಿ ಜ್ಯೋತಿಷ್ಯಂ





INDIA'S MOST POPULAR ASTROLOGER

ಪಂಡಿತ. ಶ್ರೀ ಗಣೇಶ್ ಕುಮಾರ್ ಶ್ರೀ ಶ್ರೀ ಹನುಮಾನ್ ಆರಾಧಕರು

ಕೇರಳ, ಕಲ್ಕತ್ತಾದ ಸಾವಿರಾರು ವರ್ಷಗಳ ಹಿಂದಿನ ಪ್ರಾಚೀನ ನಾಡಿಗ್ರಂಥ ಆಧಾರದಿಂದ ಸರ್ವಮಂತ್ರ ವಿದ್ಯೆ, ಜ್ಯೋತಿಷ್ಯ ಶಾಸ್ತ್ರ ಪಂಚಮಹಾಗುರುಗಳ ಬೋಧನೆಯಿಂದ ಯೋಗ ಯಜ್ಞಗಳ ಮೂಲಕ ಸರ್ವ ವಿದ್ಯೆಯನ್ನು ತಮ್ಮ ವಶದಲ್ಲಿರಿಸಿಕೊಂಡಿರುವವರು. ವಶೀಕರಣ, ಮದುವೆ, ಸಂತಾನ, ದಾಂಪತ್ಯ, ಪ್ರೇಮವಿಚಾರ, ಲೈಂಗಿಕ, ಮಾನಸಿಕ, ಗೃಹಶಾಂತಿ, ವಿದ್ಯೆ, ಆರೋಗ್ಯ, ವಿದೇಶ ಪ್ರಯಾಣ, ಹಣಕಾಸು, ವ್ಯಾಪಾರ,ಉದ್ಯೋಗ, ಕೋರ್ಟ್ ಕೇಸು, ಸಾಲಬಾಧೆ, ಮಾಟಬಾಧೆ, ಶತ್ರುಕಾಟ, ಅಲ್ಲದೆ ರಾಜಯೋಗ ವಶ ಮತ್ತು ಅಖಂಡ ಯೋಗವಶಗಳು, ಇನ್ನಿತರ ನಿಮ್ಮ ಯಾವುದೇ ಕಠಿಣ, ನಿಗೂಢ ಮತ್ತು ಗುಪ್ತ ಸಮಸ್ಯೆಗಳಿಗೆ, ಸಲಹೆ ಮತ್ತು ಪರಿಹಾರ ಶತಸಿದ್ಧ.

600 ವರ್ಷ ಹಳೆಯ ಪಂಚಸಿದ್ಧಿ ತಂತ್ರಗಳಿಂದ ನಿಮ್ಮ ದುಶ್ಚಟ, ದೀರ್ಘಾವಧಿ, ಲೈಂಗಿಕ, ಸಂತಾನ, ಸಮಸ್ಯೆಗಳಿಗೆ ಸನಾತನ ಪ್ರಕ್ರಿಯೆಗಳಿಂದ ಅತೀ ಶೀಘ್ರದಲ್ಲಿ ಸಮಗ್ರ ಪರಿಹಾರ ಕಲ್ಪಿಸುತ್ತಿರುವವರು.

ವಿ.ಸೂ.: ಇಲ್ಲಿ ಹೇಳುವ ವಿಷಯಗಳೆಲ್ಲವೂ ಗುಪ್ತವಾಗಿರುವುದರಿಂದ ನಿಮ್ಮ ಯಾವುದೇ ಸಮಸ್ಯೆಗಳನ್ನು ಹೇಳಲು ಹಿಂಜರಿಯಬೇಕಾಗಿಲ್ಲ. ದೂರವಾಣಿ ಹಾಗೂ ಪತ್ರದ ಮೂಲಕ ವಿವರಗಳನ್ನು ಪಡೆಯಬಹುದು.

ಬೆಂಗಳೂರು ಖಾಯಂ ಮನೆ ವಿಳಾಸ ನಂ.167/3, ಮೊದಲನೇ ಮಹಡಿ, 1ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಮುತ್ತುರಾಯಸ್ವಾಮಿ ದೇವಸ್ಥಾನದ ಹತ್ತಿರ, ಮೈಸೂರು ಸರ್ಕಲ್, (ಸಿರಸಿ ವೃತ್ತ), ಚಾಮರಾಜಪೇಟೆ, ಬೆಂಗಳೂರು–18.

ಮೈಸೂರಿನಲ್ಲಿಯೂ ಲಭ್ಯವಿರುತ್ತಾರೆ

ಸಮಸ್ಯೆ ಏನೇ ಇರಲಿ, ಎಷ್ಟೇ ಕಠಿಣವಾಗಿರಲಿ 600 ವರ್ಷಗಳ ಹಳೆಯ 108 ಜ್ಯೋತಿಷ್ಯ ತಂತ್ರಗಳಿಂದ ಮಹೋನ್ನತ ಪರಿಹಾರಗಳು.

ಬೆಂಗಳೂರು ಮೈಸೂರು 9880444450